ಬಾಳೆಲೆ– ಮೂರ್ಕಲ್ ರಸ್ತೆಯು ಜಿಲ್ಲ ಮುಖ್ಯ ರಸ್ತೆಯ ವರ್ಗಕ್ಕೆ ಸೇರಿದ್ದು, ಈ ಜಿಲ್ಲಾ ಮುಖ್ಯ ರಸ್ತೆಯ ಒಟ್ಟು ಉದ್ದ 4 20 ಕಿ ಮೀ ಇರುತ್ತದೆ ಈ ರಸ್ತೆಯ ಕಿಮೀ 0 00 ರಿಂದ 4 20 ಕಿಮೀ ವರೆಗೆ ಗುಡಿ ಮುಚ್ಚುವ ಕಾಮಗಾರಿಗಾಗಿ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಯೋಜನೆಯಡಿ ರೂ 1 65 ಲಕ್ಷ ಮೊತ್ತಕ್ಕೆ ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭಿಸುವ ಹಂತದಲ್ಲಿದೆ ಕುಟ್ಟದಿಂದ ಮೂರ್ಕಲದ ವರೆಗೆ ರಸ್ತೆಯ ಒಟ್ಟು ಉದ್ದ 28 20 ಕಿಮೀ ಇದ್ದು ಕುಟ್ಟದಿಂದ ನಾಗರಹೊಳೆ ರಸ್ತೆ (ಒಟ್ಟು ಉದ್ದ 10 00ಕಿಮೀ) ಮತ್ತು ನಾಗರಹೊಳೆ ಮೂರ್ಕಲ್‌ರಸ್ತೆ (ಒಟ್ಟು ಉದ್ದಕಿಮೀ) ಎಂಬ ಎರಡು ಬೇರೆ ಬೇರೆ ಜಿಲ್ಲಾ ಮುಖ್ಯ ರಸ್ತೆಯಾಗಿದೆ

ಕುಟ್ಟ ನಾಗರಹೊಳೆ ರಸ್ತೆ 0 00 ಕಿಮೀ ರಿಂದ 2 00 ಕಿಮೀ ವರೆಗೆ ಅಭಿವೃದ್ಧಿ ಪಡಿಸಲು ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ರೂ 10 00 ಲಕ್ಷಗಳಷ್ಟು ಹಾಗೂ ಸರಪಳಿ 2 00 ಕಿಮೀ ರಿಂದ 8 00 ಕಿಮೀ ವರೆಗೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿಯಲ್ಲಿ ರೂ 75 00 ಲಕ್ಷಗಳಷ್ಟು ಮಂಜೂರಾಗಿರುತ್ತದೆ

ನಾಗರಹೊಳೆ ಮೂರ್ಕಲ್ ರಸ್ತೆಯ 0 00 ರಿಂದ 5 70 ಕಿಮೀ ವರೆಗೆ ರೂ 75 00 ಲಕ್ಷಗಳ ಅನುದಾನವು ಲೆಕ್ಕ ಶೀರ್ಷಿಕೆ 3054–ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ಬಿಡುಗಡೆಯಾಗಿದ್ದು, ಅಂದಾಜು ಪಟ್ಟಿ ತಯಾರಿ ಹಂತದಲ್ಲಿದೆ ಹಾಗೂ ಇದೇ ರಸ್ತೆ ಕಿಮೀ 5 80 ರಿಂದ 7 80 ರವರೆಗೆ ಅಭಿವೃದಿಗಾಗಿ ರೂ 15 00 ಲಕ್ಷ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ ಮತ್ತು ಇದೇ ರಸ್ತೆ ಕಿಮೀ 8 00 ರಿಂದ 18 20 ಕಿಮೀ ವರೆಗೆ ಅಭಿವೃದ್ಧಿಗಾಗಿ ರೂ 75 00 ಲಕ್ಷ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ

ಇ) ಬಾಳೆಲೆ–ಮೂರ್ಕಲ್ ರಸ್ತೆ	ರೂ 1 65 ಲಕ್ಷ
ಕುಟ್ಟ–ನಾಗರಹೊಳೆ ರಸ್ತೆ	ರೂ 85 00 ಲಕ್ಷ
ನಾಗರಹೊಳೆ–ಮೂರ್ಕಲ್ ರಸ್ತೆ	ರೂ 165 00 ಲಕ್ಷ
ಒಟ್ಟು	ರೂ 251 65 ಲಕ್ಷ

321 (30) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ಕ್ಷೇತ್ರದಲ್ಲಿ ಅಗ್ನಿಶಾಮಕ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿದ್ದರೂ ಸಹ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು,

ಆ) ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) .

ಅ) ವಿರಾಜಪೇಟೆ ಕ್ಷೇತ್ರದ ಗೋಣಿಕೊಪ್ಪದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರವು ಆದೇಶ ಸಂ ಒಇ 135 ಕಅಸೇ 2004, ದಿನಾಂಕ 14–7–2005ರಲ್ಲಿ ಮಂಜೂರಾತಿ ನೀಡಿದೆ ಈ ಆದೇಶದಲ್ಲಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಸೇರಿದಂತೆ ಒಟ್ಟು 66,24,348 ರೂ ಗಳಿಗೆ ಸರ್ಕಾರ ಮಂಜೂರಾತಿ ನೀಡಿತ್ತು ಆದರೆ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಬೇಕಾದ ಸೂಕ್ತವಾದ ಜಮೀನು ದೊರೆಯದ ಕಾರಣ ಠಾಣೆಯನ್ನು ಪ್ರಾರಂಭಿಸಿರುವುದಿಲ್ಲ ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿರುವುದಿಲ್ಲ

ಆ) ನಿವೇಶನ ದೊರಕಿದ ನಂತರ ಹಣವನ್ನು ಒದಗಿಸಿಕೊಂಡು ಜಲವಾಹನ ಮತ್ತು ಇತರೆ ಉಪಕರಣಗಳನ್ನು ಪಡೆದು ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು

322 (31) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕೆವಸ್ಆರ್‌ಟಿಸಿ ಮಿನಿಬಸ್ ಡಿಪೋ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು,

ಇ) ಮಿನಿಬಸ್ ಡಿಪೋ ನಿರ್ಮಾಣಕ್ಕೆ ಸರ್ಕಾರ ವೆಚ್ಚ ಮಾಡಲಿರುವ ಹಣ ಎಷ್ಟು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಸೂಕ್ತವಾದ ನಿವೇಶನ ಪಡೆಯಲ ಪರಿಶೀಲಿಸಲಾಗುತ್ತಿದೆ

ಇ) ಸೂಕ್ತ ನಿವೇಶನವು ನಿಗಮಕ್ಕೆ ಲಭ್ಯವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು